# ಪ್ರಭಾಸ್ ಆತಿಥ್ಯಕ್ಕೆ ಕರಗಿದ ಶ್ರುತಿ ಹಾಸನ್



ಕನ್ನಡದ ನಿರ್ದೇಶಕ ಪ್ರಶಾಂತ್ ನೀಲ್ ಈಗ ತೆಲುಗಿನ ನೆಲದಲ್ಲಿ ಸದ್ದು ಮಾಡುತ್ತಿದ್ದಾರೆ. 'ಸಲಾರ್' ಸಿನಿಮಾ ಚಿತ್ರೀಕರಣದಲ್ಲಿ ಅವರು ತೊಡಗಿದ್ದು, ಪ್ರಭಾಸ್ ಜತೆಯಲ್ಲಿ ಶ್ರುತಿ ಹಾಸನ್ ಕೂಡ ಅಭಿನಯಿಸಿದ ಕೆಲವು ದೃಶ್ಯಗಳ ಚಿತ್ರೀಕರಣ ಇತ್ತೀಚೆಗೆ ನಡೆಯಿತು.

ಸೆಟ್‌ನಲ್ಲಿ ಪ್ರಭಾಸ್ ಆರ್ಡರ್ ಮಾಡಿ ತರಿಸಿದ ಖಾದ್ಯಗಳನ್ನು ನೋಡಿ ಶ್ರುತಿ ಹಾಸನ್ ಬಾಯಿ ತುಂಬಾ ಲಾಲಾರಸ. ಅಬು ಧಾಬಿ ಶೈಲಿಯ ಚಿಕನ್ ಬಿರಿಯಾನಿಯಿಂದ ಹಿಡಿದು ಪನೀರ್ ಕರ್ರಿವರೆಗೆ ತರಹೇವಾರಿ ತಿನಿಸುಗಳನ್ನು ಪ್ರಭಾಸ್ ತರಿಸಿದ್ದರು. ಅಷ್ಟೊಂದು ಆಹಾರ ವೈವಿಧ್ಯ ನೋಡಿ ಶ್ರುತಿ ಮೊದಲು ದಂಗಾದರಂತೆ. ಸಿನಿಮಾದವರೆಲ್ಲ ಸಾಮಾನ್ಯವಾಗಿ ಡಯೆಟ್ ಮಾಡುತ್ತಾರೆ. ಹೀಗಾಗಿ ಇಷ್ಟೆಲ್ಲ ಖಾದ್ಯಗಳನ್ನು ನೋಡುವುದೇ ವಿರಳವಾದ್ದರಿಂದ ಅವರಿಗೆ ಅಚ್ಚರಿಯಾದದ್ದು. ಆಮೇಲೆ ತಮ್ಮಿಷ್ಟದ ತಿನಿಸುಗಳ ರುಚಿ ನೋಡಿ ಬಾಯಿ ಚಪ್ಪರಿಸಿದರು.

'ಪ್ರಭಾಸ್ ಸೂಪರ್ ಸ್ಟಾರ್ ಎಂದು ಗೊತ್ತಿತ್ತು. ಅವರ ಜತೆ ಕೆಲಸ ಮಾಡಿದವರೆಲ್ಲ ಡಾರ್ಲಿಂಗ್ ಎಂದು ಕರೆದಿದ್ದನ್ನೂ ಕೇಳಿದ್ದೆ. ಆದರೆ, ಅವರನ್ನು ಯಾಕೆ ಎಲ್ಲರೂ ಅಷ್ಟು ಇಷ್ಟಪಡುತ್ತಾರೆ ಎನ್ನುವುದು ಸಲಾರ್ ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿ ನನಗೆ ಗೊತ್ತಾಯಿತು. ನನಗೆ ಏನೆಲ್ಲ ಇಷ್ಟ ಎಂದು ಅವರಿಗೆ ಹೇಳಿದೆನೋ ಎಲ್ಲವನ್ನೂ ತರಿಸಿಕೊಡುವಷ್ಟು ಉದಾರಿ ಅವರು. ಸಲಾರ್ ಸಿನಿಮಾ ನನಗೆ ಕೊಟ್ಟಿರುವ ನೆನಪುಗಳಲ್ಲಿ ಇದೂ ಒಂದು' ಎಂದು ಶ್ರುತಿ ತಮ್ಮ ಆಹಾರಪ್ರೀತಿಯನ್ನೂ ಹೇಳಿಕೊಂಡರು. ಆದರೆ, 'ಸಲಾರ್' ಚಿತ್ರದ ಕಥೆಯ ಒಳಸುಳಿಗಳನ್ನು ಮಾತ್ರ ಬಿಟ್ಟುಕೊಡಲಿಲ್ಲ. ■

# ಕಿಶೋರ್ ಸಿನಿಮಾ ಕನಸಿಗೆ ಹೊಸ ಅರ್ಥ



ಹಿಂದಿ ಚಿತ್ರರಂಗದ ಲವಲವಿಕೆಯ ವ್ಯಕ್ತಿಗಳಲ್ಲಿ ಕಿಶೋರ್‌ಕುಮಾರ್ ಹೆಸರು ಎದ್ದುಕಾಣುತ್ತದೆ. 'ಯೂಡ್ಲಿ' ಪ್ರಕಾರದ ಪಾಶ್ಚಿಮಾತ್ಯ ಪಲುಕುಗಳನ್ನು ದೇಸಿ ಚಿತ್ರಗೀತೆಗಳಲ್ಲಿ ಹಾಡಿ, ತಮ್ಮತನದ ರುಜು ಹಾಕಿದವರು ಕಿಶೋರ್. ಅವರ ಮಸ್ತಿ ದನಿಯ ಮಜಾ ಅನುಭವಿಸಿದವರು ತಲೆಮಾರುಗಳಿಂದಲೂ ಇದ್ದಾರೆ. ನಟನಾಗಿಯೂ ಅವರನ್ನು ಮರೆಯಲಾಗದು. ಕಿಶೋರ್ ಕುಮಾರ್ ಅವರ ಆತ್ಮಕಥೆಯನ್ನು ಆಧರಿಸಿದ ಸಿನಿಮಾ ಮಾಡಬೇಕು ಎನ್ನುವುದು ಲಾಗಾಯ್ತಿನ ಯೋಚನೆ.

ಶೂಜಿತ್ ಸರ್ಕಾರ್, ಅನುಭವ್ ಸಿನ್ಹ ತರಹದವರೂ ಕಿಶೋರ್ ಕುಮಾರ್ ಬದುಕನ್ನೇ ಆಧರಿಸಿದ ಸಿನಿಮಾ ಮಾಡುವ ಆಲೋಚನೆಯನ್ನು ಮಾಡಿದ್ದರು. ಸಿನಿಮೀಯವಾದ ವ್ಯಕ್ತಿತ್ವ ಕಿಶೋರ್ ಅವರದ್ದು ಆಗಿತ್ತೆನ್ನುವುದೂ ನಿಜ. ಆದರೆ, ಇದುವರೆಗೆ ಚರ್ಚೆಯ ಹಂತದಲ್ಲೇ ಅವರ ಸಿನಿಮಾ ಕುರಿತು ಆಲೋಚನೆಗಳು ನಿಂತುಹೋಗಿದ್ದವು. ಈಗ ಅವರ ಕುಟುಂಬದ ಸದಸ್ಯರೆಲ್ಲ ಸೇರಿ ಶ್ರೇಷ್ಠ ಗಾಯಕನ ಬದುಕಿನ ಚಿತ್ರ ಮಾಡಲು ನಿರ್ಧರಿಸಿದ್ದಾರೆ.

ಕಿಶೋರ್ ಕುಮಾರ್ ಮಗ ಅಮಿತ್ ಕುಮಾರ್, ಮಗಳು ಸುಮಿ ಹಾಗೂ ಕಿಶೋರ್ ಪತ್ನಿ ಲೀನಾ ಚಂದಾವರ್ಕರ್ ಎಲ್ಲರೂ ಜೂನ್ ತಿಂಗಳಲ್ಲಿ ಇಂಥದೊಂದು ನಿರ್ಣಯ ತೆಗೆದುಕೊಂಡರು.

ಕಿಶೋರ್ ಹುಟ್ಟುಹಬ್ಬ ನಡೆದ ತಿಂಗಳು ಜೂನ್. ಆಗ ಗಂಗೂಲಿ ಕುಟುಂಬದವರೆಲ್ಲ ಸಂಭ್ರಮದಲ್ಲಿದ್ದರು. ಎಲ್ಲರೂ ಕಿಶೋರ್ ನೆನಪುಗಳನ್ನು ಮೆಲುಕುಹಾಕಿದವರೇ. ಹಾಗೆ ಎಲ್ಲರೂ ಕಲೆತ ಆ ಕ್ಷಣದಲ್ಲೇ ಸಿನಿಮಾ ಮಾಡುವ ಗಂಭೀರ ಯೋಚನೆ ಮೂಡಿದ್ದು ಎಂದು ಅಮಿತ್ ಕುಮಾರ್ ಹೇಳಿದರು.

ಕಿಶೋರ್ ಬದುಕಿನಲ್ಲಿ ಒಡನಾಡಿದ ಆಪ್ತೇಷ್ಟರನ್ನೆಲ್ಲ ಮೊದಲು ಪಟ್ಟಿ ಮಾಡಿಕೊಂಡು, ಒಬ್ಬರಾದ ಮೇಲೆ ಒಬ್ಬರಂತೆ ಅವರ ಸಂದರ್ಶನಗಳನ್ನು ರೆಕಾರ್ಡ್ ಮಾಡಿಕೊಳ್ಳುವುದು ಮೊದಲ ಹೆಜ್ಜೆ. ಅದಾದ ನಂತರ ಕಿಶೋರ್ ಬದುಕನ್ನು ಹೇಗೆಲ್ಲ ತೆರೆಗೆ ತರಬೇಕು ಎಂಬ ಯೋಚನೆಯನ್ನು ಪಕ್ಕಾ ಮಾಡಿಕೊಳ್ಳುವುದು ಉದ್ದೇಶ. ಇಷ್ಟೆಲ್ಲ ಆಗಿ, ಚಿತ್ರಕಥೆ ಸಿದ್ಧವಾಗಲು ಒಂದು ವರ್ಷವಾದರೂ ಬೇಕು ಎನ್ನುತ್ತಾರೆ ಅಮಿತ್.

ಕಿಶೋರ್ ಕುಮಾರ್ ಕುಟುಂಬದವರೇ ನಿರ್ಮಿಸಿ–ನಿರ್ದೇಶಿಸಲು ನಿರ್ಧರಿಸಿರುವುದರಿಂದ, ಈ ಹಿಂದೆ ಇಂತಹ ಪರಿಕಲ್ಪನೆ ಮೂಡಿಸಿಕೊಂಡಿದ್ದ ನಿರ್ದೇಶಕರೆಲ್ಲ ಈಗ ಈ ವಿಷಯದಲ್ಲಿ ಸುಮ್ಮನಾಗಬೇಕಿದೆ. ಕಿಶೋರ್ ಕುಟುಂಬದವರ ಈ ಸಿನಿಮಾ ಕನಸಿಗೆ ನಿಜಕ್ಕೂ ರೆಕ್ಕೆಪುಕ್ಕ ಮೂಡೀತೇ ಎಂದು ನೋಡಬೇಕಷ್ಟೆ.

■ **ವಿಶಾಖ್ ಎನ್.**